ಇ) ಸದರಿ ಆಸ್ಪತ್ರೆಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಮಂಡ್ಯದ ಜಿಲ್ಲಾಧಿಕಾರಿಗಳು ಮಂಡ್ಯ ಗ್ರಾಮದ ಸರ್ವೆ ನಂ. 77ರಲ್ಲಿರುವ 15 ಗುಂಟೆ ಜಮೀನನ್ನು ಆಸ್ಪತ್ರೆ ಕಟ್ಟಡ ಕಟ್ಟಲು ಮಂಜೂರು ಮಾಡಿರುತ್ತಾರೆ. ಇದರ ಬಗ್ಗೆ ಲೋಕೋಪಯೋಗಿ ಇಲಾಖೆಯಿಂದ ಕಟ್ಟಡದ ಅಂದಾಜು ಮತ್ತು ನಕ್ಷೆಯನ್ನು ತಯಾರಿಸಿ ಕಳುಹಿಸಿ ಕೊಡಲು ಈಗಾಗಲೇ ಕೋರಲಾಗಿದೆ. ಮಾಹಿತಿಯು ಸ್ವೀಕೃತವಾದ ನಂತರ ಆಯವ್ಯಯವನ್ನು ಕಲ್ಪಿಸಿಕೊಂಡು ಕಾಮಗಾರಿ ಕೆಲಸವನ್ನು ಕೈಗೆತ್ತಿಕೊಳ್ಳಲು ಕೋರಲಾಗುವುದು.

ಸೋಮವಾರಪೇಟೆ ತಾಲ್ಲೂಕು ಆಲೂರು ಸಿದ್ದಾಪುರ ಗ್ರಾಮಗಳಲ್ಲಿ ಗ್ರಂಥಾಲಯ ಮಂಜೂರಾತಿ

2729 (3450) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕು ಆಲೂರು ಸಿದ್ದಾಪುರ ಗ್ರಾಮಗಳಲ್ಲಿ ಗ್ರಂಥಾಲಯ ಮಂಜೂರು ಮಾಡಿದ್ದು, ಈ ಗ್ರಂಥಾಲಯ ಈವರೆಗೆ ಕಾರ್ಯಾರಂಭ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಮಂಜೂರಾತಿ ಆದೇಶದಲ್ಲಿ ಆಲೂರು ಸಿದ್ದಾಪುರ ಗ್ರಾಮವು ರಾಯಚೂರು ಜಿಲ್ಲೆಯೆಂದು ನಮೂದಾಗಿರುವುದನ್ನು ತಿದ್ದುಪಡಿ ಮಾಡಲು ಕೋರಿದ್ದು ತಿದ್ದುಪಡಿ ಆದೇಶ ಹೊರಡಿಸಲಾಗಿದೆಯೇ ಇಲ್ಲದಿದ್ದಲ್ಲಿ ಯಾವಾಗ ಹೊರಡಿಸಲಾಗುವುದು?

ಇ) ಈ ಗ್ರಂಥಾಲಯ ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಅ) ಇಲ್ಲ.

ಆ) ಸರ್ಕಾರ ತಿದ್ದುಪಡಿ ಆದೇಶ ಸಂಖ್ಯೆ: ಇಡಿ 111 ಯೋಯೋಕ 97: ದಿನಾಂಕ: 8.6.1998ರಂದು ಹೊರಡಿಸಲಾಗಿದೆ.

ಇ) ದಿನಾಂಕ: 1.8.98ರಂದು ಪ್ರಾರಂಭಿಸಲಾಗಿದೆ.

2730 (3451) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೈದ್ಯಾಧಿಕಾರಿಗಳಿಗೆ ಬಡ್ತಿ ಕೊಡುವಂತಹ ಸಂದರ್ಭದಲ್ಲಿ ಯಾವ ಮಾನದಂಡವನ್ನು ಅನುಸರಿಸಲಾಗುತ್ತದೆ.

ಆ) ಜೇಷ್ಠತೆಯನ್ನು ಕಡೆಗಣಿಸಿ ಕೊಡಗಿನ ಡಿಹೆಚ್ಒ ಇವರಿಗೆ ಬಡ್ತಿ ಕೊಡಲಾಗಿರುವುದು ನಿಜವೇ? ಹಾಗಿದ್ದಲ್ಲಿ ಯಾವ ಆಧಾರದ ಮೇಲೆ ಕೊಡಲಾಗಿದೆ. ಇದರಿಂದ ಸೀನಿಯಾರಿಟಿಯನ್ನು ಬದಿಗೊತ್ತಿರುವುದು ಕಂಡು ಬರುತ್ತದೆ.

ಇ) ಇದರಿಂದ ಹಿರಿಯ ಅಧಿಕಾರಿಗಳಿಗೆ ಅನ್ಯಾಯವಾಗುವುದಿಲ್ಲವೇ?

ಡಾ॥ ಎ. ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಸೇವಾ ಜೇಷ್ಠತೆ ಮತ್ತು ಅರ್ಹತೆ.

ಆ) ಡಾ॥ ಎಸ್. ಉಸ್ಮಾನ್ ಖಾನ್, ಹಿರಿಯ ತಜ್ಞರು ಇವರನ್ನು ಸದರಿಯವರ ಪದನಾಮವಾದ ಹಿರಿಯ ತಜ್ಞರುಗಳ ವೃಂದಕ್ಕೆ ಡಿಹೆಚ್ ಒ ಹುದ್ದೆಯು ಸಮಾನ ಹುದ್ದೆಯೆಂಬ ಕಾರಣದ ಮೇಲೆ ಆ ಹುದ್ದೆಗೆ ನೇಮಿಸಲಾಗಿತ್ತು. ಈಗ ಅವರನ್ನು ಬೆಂಗಳೂರಿನ ಸಾರ್ವಜನಿಕ ಆರೋಗ್ಯ ಸಂಸ್ಥೆಯಲ್ಲಿ ಖಾಲಿ ಇರುವ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ಆದ್ದರಿಂದ ಸೇವಾ ಜೇಷ್ಠತೆಯನ್ನು ಬದಿಗೊತ್ತಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಕೊಡಗು ಜಿಲ್ಲಾ ಪಂಚಾಯತಿಗೆ ಬಿಡುಗಡೆ ಮಾಡಿರುವ ಹಣ

2731 (3452) ಶ್ರೀ ಅಪ್ಪಚ್ಚುರಂಜನ್. ಎಂ. ಪಿ. (ಸೋಮವಾರಪೇಟೆ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 5 ವರ್ಷಗಳಲ್ಲಿ ಕೊಡಗು ಜಿಲ್ಲಾ ಪಂಚಾಯತಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ (ವರ್ಷವಾರು ವಿವರ ಒದಗಿಸುವುದು)

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):

ಅ) ಕೊಡಗು ಜಿಲ್ಲಾ ಪಂಚಾಯತಿಗೆ ಕಳೆದ ಐದು ವರ್ಷಗಳಲ್ಲಿ ಬಿಡುಗಡೆ ಮಾಡಿದ ಮೊತ್ತ ಕೆಳಕಂಡಂತಿದೆ.

ರೂ. ಲಕ್ಷಗಳಲ್ಲಿ

ವರ್ಷ	ಯೋಜನೆ	ಯೋಜನೇತರ
1995-96	2881.02	2368.33
1996-97	1966.20	2617.51
1997-98	2172.02	3200.30
1998-99	2252.53	3546.18
1999-2000	2238.06	3974.46

ರಾಜ್ಯದಲ್ಲಿ ವಿಶ್ವಬ್ಯಾಂಕ್ ಸಹಾಯದಿಂದ ಕುಡಿಯುವ ನೀರು ಹಾಗೂ ಚರಂಡಿ ವ್ಯವಸ್ಥೆ

2732 (3254) ಶ್ರೀ ಬಸವರಾಜು .ಹೆಚ್. ಸಿ. (ಪಿರಿಯಾಪಟ್ಟಣ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವಬ್ಯಾಂಕ್ ಸಹಾಯದಿಂದ ಕುಡಿಯುವ ನೀರು ಹಾಗೂ ಚರಂಡಿ ವ್ಯವಸ್ಥೆಯನ್ನು ರಾಜ್ಯದಲ್ಲಿ ಎಷ್ಟು ಗ್ರಾಮಗಳಲ್ಲಿ ಕೈಗೊಳ್ಳಲಾಗಿದೆ ಹಾಗೂ ಎಷ್ಟು ಯೋಜನೆಗಳು ಪೂರ್ತಿಗೊಂಡಿವೆ? ಈ ಯೋಜನೆಗೆ ಎಷ್ಟು ಹಣ ಖರ್ಚಾಗಿದೆ ?